# ಪ್ರಥಮ ಪಿ.ಯು.ಸಿ–2023

**ವಿಷಯ ಸಂಕೇತ:01** **ಪ್ರಥಮ ಪಿ.ಯು.ಸಿ. ಕನ್ನಡ** **ಒಟ್ಟು ಪ್ರಶ್ನೆಗಳು:54**

**ಸಮಯ:3.15 ಗಂಟೆಗಳು** **ಗರಿಷ್ಠ ಅಂಕಗಳು:100**

## ಅ–ವಿಭಾಗ

I ಅ) ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **10x1=10**

1)ಅಲ್ಲಮಪ್ರಭುವಿನ ಅಂಕಿತ ಯಾವುದು?

ಅ)ರಾಮೇಶ್ವರ ಆ)ಗುಹೇಶ್ವರ ಇ)ಬಸವೇಶ್ವರ ಈ)ದಾನೇಶ್ವರ

2)ಕೈಲಾಸದಲ್ಲಿ ಚೆನ್ನಯ್ಯನಿಗೆ ಯಾವ ಪದವಿ ಲಭಿಸಿತು?

ಅ)ಮಂತ್ರಿಪದವಿ ಆ)ಅಧ್ಯಕ್ಷಪದವಿ ಇ)ಗಣಪದವಿ ಈ)ವೀರಪದವಿ

3)ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?

ಅ)ಹಸಿರು ಆ)ಹಳದಿ ಇ)ನೀಲಿ ಈ)ಕಪ್ಪು

4)ಅಖಂಡ ಕರ್ನಾಟಕವನ್ನು ಹರಸುತ್ತಿರುವವನು ಯಾರು?

ಅ)ಗಾಂಧೀ ಆ)ನೆಹರು ಇ)ದೇವರು ಈ)ಭಕ್ತರು

5)ಕನಕದಾಸರು ರಾಗಿಯ ಬಗ್ಗೆ ಬರೆದ ಕೃತಿ ಯಾವುದು?

ಅ)ರಾಗಿಮಹಾತ್ಮೆ ಆ)ರಾಗಿಚರಿತ್ರೆ ಇ)ರಾಗಾನುರಾಗ ಈ)ರಾಮಧಾನ್ಯಚರಿತ್ರೆ

6)ಶಾಸ್ತ್ರಿ ಮಾಸ್ತರರ ಹೆಂಡತಿಯ ಹೆಸರೇನು?

ಅ)ನಿಂಗಮ್ಮ ಆ)ಅಂಬವ್ವ ಇ)ಸಂಗವ್ವ ಈ)ಮಾರವ್ವ

7)ಗೌತಮನ ತಾಯಿಯ ಹೆಸರೇನು?

ಅ)ಗೌತಮಿ ಆ)ಮಾಯಾದೇವಿ ಇ)ಯಶೋಧರೆ ಈ)ಪಾರ್ವತೀದೇವಿ

8)ಬೋಳೇಶಂಕರನ ಊರು ಯಾವುದು?

ಅ)ಕಾಳಾಪುರ ಆ)ದೇವಾಪುರ ಇ)ಕೈಲಾಸಪುರ ಈ)ಶಿವಾಪುರ

9)ಪಿಶಾಚಿಗಳು ಯಾರ ಹೆಸರನ್ನು ಕೇಳಿದರೆ ಹೆದರುತ್ತವೆ?

ಅ)ಶಿವನ ಹಸರು ಆ)ಇಂದ್ರನ ಹೆಸರು ಇ)ಸೈತಾನನ ಹೆಸರು ಈ)ಕೋಡಂಗಿ ಹೆಸರು

10)ರಾಜಕುಮಾರಿಗೆ ಬಂದ ರೋಗ ಯಾವುದು?

ಅ)ತಲೆನೋವು ಆ)ಕಣ್ಣುಬೇನೆ ಇ)ಮೈಕೈನೋವು ಈ)ಹೊಟ್ಟೆನೋವು

ಆ) 11. ಹೊಂದಿಸಿ ಬರೆಯಿರಿ. **5x1=5**

| | |
|---|---|
| ಅ. ಎಚ್ ಎಸ್ ಶಿವಪ್ರಕಾಶ್ | 1. ಲೋಹದ ಕಣ್ಣು |
| ಆ. ಆರಿಫ್ ರಾಜಾ | 2. ದೇವರಿಗೊಂದು ಅರ್ಜಿ |
| ಇ. ಲಕ್ಕೂರು ಸಿ ಆನಂದ | 3. ಕೂಸು ಕಂಡ ಕನಸಿನಲ್ಲಿ |
| ಈ. ಬಸವರಾಜ ಒಕ್ಕೂಂದ | 4. ಜಂಗಮ ಫಕೀರನ ಜೋಳಿಗೆ |
| ಉ. ಎಚ್ ಎಲ್ ಪುಷ್ಪ | 5. ಮಗು ಮತ್ತು ಹಣ್ಣುಗಳು |
| | 6. ಜೈಮಿನಿ ಭಾರತ |

ಇ) 12. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರಗಳನ್ನು ಆರಿಸಿ ಬರೆಯಿರಿ. **5x1=5**

( ರಂಗರಾವ್, ರೈತ ದಂಗೆ, ಕರಿಸಿದ್ದೇಗೌಡ, ತಮಾಷೆಯಾಗಿ, ದುಷ್ಯಂತ)

ಕ) ಹುಡುಗನಿಗೆ ಮಹಾತ್ಮ ಗಾಂಧಿ ಎಂಬ ಹೆಸರಿಟ್ಟವರು ____________

ಚ) ಜ್ಯೋತಿಷಿಗಳ ಭವಿಷ್ಯವಾಣಿ ಓದಲು ____________________ ಇರುತ್ತದೆ.

ಟ) ಬಡವರ ವಕೀಲರೆಂದು ಪ್ರಸಿದ್ಧರಾದವರು ____________________.

ತ) ಭರತನ ತಂದೆಯ ಹೆಸರು ______________________

ಪ) ಲೇಖಕರು ಸಿಪಾಯಿ ದಂಗೆಯನ್ನು ___________________ಎಂದಿದ್ದಾರೆ.

## ಆ–ವಿಭಾಗ

II ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **4x2=8**

13) ಕರ್ಣನ ಜನ್ಮರಹಸ್ಯವನ್ನು ಯಾರು ಯಾರು ಅರಿತಿದ್ದರು?

14) ಸೀತೆಯನ್ನು ಕಾಡಿನ ಪ್ರಾಣಿಗಳು ಹೇಗೆ ಉಪಚರಿಸಿದವು?

15) ಸಿಡಿಲು ಗುಡುಗುಗಳನ್ನು ಕಳುಹಿಸು ಎಂದು ಮಾದೇವ ಯಾರನ್ನು ಕೇಳುತ್ತಾನೆ?

16) ಹೊಟ್ಟೆಯೊಳಗಿನ ಮಗುವು ಯಾವ ವರವನ್ನು ಬೇಡುತ್ತಿದೆ?

17) ಚಿತಾಭಸ್ಮವಾದ ತರು ಯಾವುದು ಮತ್ತು ಎಲ್ಲಿ?

III ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **3x2=6**

18) ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?

19) ರಂಗರಾವ್ ಸಮಾಧಿಯ ಮೇಲೆ ಬರೆದ ಹೇಳಿಕೆ ಯಾವುದು?

20) ಅಪರಾಜಿತಾ ಬಳ್ಳಿಯ ಗುಣ ಯಾವುದು?

21) ನಮ್ಮ ಆರೋಗ್ಯದ ಮೇಲೆ ವಿದೇಶಿ ಹೋಟೆಲ್‌ಗಳು ನಡೆಸಿದ ದಾಳಿಗಳೇನು?

IV ಇ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **4x2=8**

22)ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?

23)ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?

24)ಕೋಡಂಗಿಯು ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ?

25)ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?

26)ಬೋಳೆಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

## ಇ–ವಿಭಾಗ

V ಅ) ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **2x3=6**

27) ನಿನ್ನೊರೆಗೆ ದೊರೆಗೆ ಗಂಡರುಮೊಳರೇ

28) ವೇಷಧಾರಿಗಳೆಲ್ಲ ನಿಮ್ಮ ಕೂಟಕ್ಕೆ ಹೊರಗು

29) ಎಲ್ಲರಿಗೂ ದಕ್ಕುವ ಎಲಚಿಯಾಗು

ಆ) ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1x3=3**

30) ಇಲ್ಲಿ ನನ್ನ ನಿನ್ನ ರಾಗವ ಯಾರು ಕೇಳಾರು?

31) ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ

ಇ) ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1x3=3**

32) ಇವನಿಗೇನು ಹೆಂಡತೀನೇ? ಮಕ್ಕಳೇ?

33) ದಾರಿ ತಪ್ಪಿದವರಿಗೆ ಗಾದೆ ಬಲ್ಲವರು ಬುದ್ಧಿ ಹೇಳುತ್ತಾರೆ.

ಈ–ವಿಭಾಗ

**vi**. ಅ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **2x4=8**

34) ಚೆನ್ನಯ್ಯ ತನ್ನ ಕಾಯಕವನ್ನು ಹೇಗೆ ಮಾಡುತ್ತಿದ್ದನು?

35) ಸೀತೆ ಕಲ್ಮರಂ ಕರಗುವಂತೆ ದುಃಖಿಸುವ ಪರಿಯನ್ನು ವಿವರಿಸಿ.

36) ಎಲ್ಲರನ್ನು ರಕ್ಷಿಸುವ ದೇವರು ನಮ್ಮನ್ನೂ ರಕ್ಷಿಸುತ್ತಾನೆ ಎಂಬುದನ್ನು ಕನಕದಾಸರು ಹೇಗೆ ಹೇಳಿದ್ದಾರೆ?

37) ಸರಸ್ವತಿಯ ಸಚಿವಮಂಡಲವನ್ನು ಕುರಿತು ಬರೆಯಿರಿ.

ಆ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **1x4=4**

38) ರಾಗಿಮುದ್ದೆ ಯಾವ ಬಗೆಯ ಸಾರುಗಳ ಜೊತೆ ಸೇರಿ ಎಂತಹ ರಸಾನುಭವವನ್ನು ಸೃಷ್ಟಿಸುತ್ತದೆ? ವಿವರಿಸಿ.

39) ಮಾಸ್ತರರು ಮತ್ತು ಅಂಬವ್ವರ ಪ್ರೀತಿ ಕಡಲಲ್ಲಿ ಕತೆಗಾರರ ಬಾಲ್ಯ ಹೇಗೆ ಕಳೆಯಿತು?

40) ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕತೆ ಯಾವುದು?

ಇ) ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **1x4=4**

41)ಬೋಳೇಶಂಕರ ಮತ್ತು ಅವನ ಅಣ್ಣಂದಿರನ್ನು ಭಾಗವತರು ಹೇಗೆ ಪರಿಚಯಿಸುತ್ತಾರೆ?

42)ಬೋಳೇಶಂಕರನು ನಾಣ್ಯ ಹಾಗೂ ಸಿಪಾಯಿಗಳನ್ನು ಪಡೆದ ಪ್ರಸಂಗವನ್ನು ವಿವರಿಸಿ.

43)ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾದ ಕಥೆಯನ್ನು ತಿಳಿಸಿ.

ಉ–ವಿಭಾಗ

**Vii** ಅ) ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. **1x5=5**

44) ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟೀಗಳ್
ನಿನಗಾಂ ಕುಡುವಂತಾದುದೆ
ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ

ಅಥವಾ

ಎಂದಿಗಯ್ಯ, ಎಂದಿಗೆ? ಎಂದಿಗೋ, ಎಂದಿಗೆ?
ನನ್ನ ನಾಡ ಮಂದಿಗೆ.
ತಿಳಿವು ಹೊಳೆವುದೆಂದಿಗೆ?
ನಾಡ ನೂರು ಕೋಟಿ ಗಂಡು ಹೆಣ್ಣು ಕೂಸು ಕುನ್ನಿಗೆ,
ಹುಟ್ಟಿಗಂಟಿ ಬಂದ ಚಿತ್ತದಾಸ್ಯ ಕಳೆವುದೆಂದಿಗೆ?

ಭಾಷಾಭ್ಯಾಸ

**Viii** ಅ)ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ: **6x2=12**

45) ಕೆಳಗಿನ ಎರಡು ಪದಗಳ ಅರ್ಥ ಬರೆಯಿರಿ. ಕೈದು ಸಮರ ನಖ

46) ಕೆಳಗಿನ ಎರಡು ಪದಗಳ ತದ್ಭವಗಳನ್ನು ಬರೆಯಿರಿ. ಪ್ರಾಣ ಆಕಾಶ ದೃಷ್ಟಿ

47) ಕೆಳಗಿನ ಎರಡು ಪದಗಳನ್ನು ಬಿಡಿಸಿ ಬರೆಯಿರಿ. ದಿವ್ಯಾನ್ನ ಜಲಾಂಜಲಿ ಬಾಲಕರಾಶ್ರಮ

48) ಕೆಳಗಿನ ಎರಡು ಪದಗಳ ಸಮಾನಾರ್ಥಗಳನ್ನು ಬರೆಯಿರಿ. ಸೂರ್ಯ ಭೂಮಿ ತುರಗ

49) ಕೆಳಗಿನ ಎರಡು ಪದಗಳ ವಿರುದ್ಧ ಪದಗಳನ್ನು ಬರೆಯಿರಿ. ಕನಸು ಉಚಿತ ನಂಬಿಕೆ

50) ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿ. ಕರುಳಕುಡಿ ಮೊರೆಯಿಡು ಚಾಟಿಯೇಟು

51)ದ್ವಿರುಕ್ತಿಗಳಿಗೆ ಎರಡು ಉದಾಹರಣೆ ಕೊಡಿ.

ಇ) ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. **1x5=5**

52) ಪುಸ್ತಕಗಳ ಮಹತ್ವ

ಅಥವಾ

ಹವ್ಯಾಸಗಳು

ಈ)ಪತ್ರಲೇಖನ: ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. **1x4=4**

53)ನಿಮ್ಮ ಊರಿಗೊಂದು ಗ್ರಂಥಾಲಯ ಸ್ಥಾಪಿಸಲು ನಗರ ಕೇಂದ್ರ ಗ್ರಂಥಾಲಯದ ಅಧಿಕಾರಿಗಳಿಗೊಂದು ಪತ್ರ ಬರೆಯಿರಿ.

ಅಥವಾ

ನಿಮ್ಮ ಕಾಲೇಜಿನಲ್ಲಿ ಆಚರಿಸಿದ ಗಣರಾಜ್ಯೋತ್ಸವದ ಆಚರಣೆಯನ್ನು ಕುರಿತು ನಿಮ್ಮ ಸ್ನೇಹಿತನಿಗೊಂದು ಪತ್ರ ಬರೆಯಿರಿ.

ಉ)ಈ ಕೆಳಗಿನ ಒಂದು ಗಾದೆಯನ್ನು ವಿಸ್ತರಿಸಿ. **1x4=4**

54) ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

ಅಥವಾ

ಮಾಡಿದ್ದುಣ್ಣೋ ಮಹಾರಾಯ

--------

**ಕನ್ನಡ (1) ನೀಲನಕ್ಷೆ**

**ಪ್ರಥಮ ಪಿ ಯು ಸಿ – 2023**

| ಉದ್ದೇಶಗಳು | ಅಂಕ ನಿಗದಿ | ಜ್ಞಾನ (ಬಹು ಆಯ್ಕೆ ಪ್ರಶ್ನೆಗಳು) | ಗ್ರಹಿಕೆ (ಅಂಕ) | ಅಭಿವ್ಯಕ್ತಿ (ಅಂಕ) | ಪ್ರಶಂಸೆ(ಅಂಕ) |
|---|---|---|---|---|---|
| | | 1 ಅಂಕ | 2 ಅಂಕ | 3 ಅಂಕ | 4ಅಂಕ 5ಅಂಕ |
| ಪದ್ಯ 1.ದುರ್ಯೋಧನ ವಿಲಾಪ | 10 | | 1(2) | 1(3) | 1(5) |
| 2.ವಚನಗಳು | 04 | 1(1) | | 1(3) | |
| 3.ದೇವನೊಲಿದನ ಕುಲವೇ ಸತ್ಕುಲಂ | 05 | 1(1) | | | 1(4) |
| 4.ಹಲುಬಿದಳ್ ಕಲ್ಮರಂ ಕರಗುವಂತೆ | 06 | | 1(2) | | 1(4) |
| 5.ತಲ್ಲಣಿಸದಿರು ಕಂಡ್ಯ ತಾಳು ಮನವೇ | 05 | 1(1) | | | 1(4) |
| 6.ಸಿಸುಮಕ್ಕಳಿಗೊಲಿದ ಮಾದೇವ | 02 | | 1(2) | | |
| 7.ಅಖಂಡ ಕರ್ನಾಟಕ | 05 | 1(1) | | | 1(4) |
| 8.ಎಂದಿಗೆ | 05 | | | | 1(5) |
| 9.ಮಗು ಮತ್ತು ಹಣ್ಣುಗಳು | 04 | 1(1) | | 1(3) | |
| 10.ನಾ ಬರಿ ಭ್ರೂಣವಲ್ಲ | 02 | | 1(2) | | |
| 11.ಮತ್ತೆ ಸೂರ್ಯ ಬರುತ್ತಾನೆ | 02 | | 1(2) | | |
| 12.ಸುನಾಮಿ ಹಾಡು | 01 | 1(1) | | | |
| 13.ಹೊಲಿಗೆ ಯಂತ್ರದ ಅಮ್ಮಿ | 01 | 1(1) | | | |
| 14.ದೇವರಿಗೊಂದು ಅರ್ಜಿ | 01 | 1(1) | | | |
| 15.ಜೀವಕೆ ಇಂಧನ | 01 | 1(1) | | | |
| ಗದ್ಯ 1.ಗಾಂಧಿ | 04 | 1(1) | | 1(3) | |
| 2.ರಾಗಿಮುದ್ದೆ | 05 | 1(1) | | | 1(4) |
| 3.ಜ್ಯೋತಿಷ್ಯ:ಅರ್ಥಪೂರ್ಣವೋ ಅರ್ಥರಹಿತವೋ | 04 | 1(1) | | 1(3) | |
| 4.ಶಾಸ್ತ್ರಿ ಮಾಸ್ತರ ಮತ್ತವರ ಮಕ್ಕಳು | 05 | 1(1) | | | 1(4) |
| 5.ಬುದ್ಧ ಬಿಸಿಲೂರಿನವನು | 03 | 1(1) | 1(2) | | |
| 6.ಮಹಾತ್ಮರ ಗುರು | 03 | 1(1) | 1(2) | | |
| 7.ನಿರಾಕರಣೆ | 03 | 1(1) | 1(2) | | |
| 8.ಕೃಷಿಸಂಸ್ಕೃತಿ ಮತ್ತು ಜಾಗತೀಕರಣ | 03 | 1(1) | 1(2) | | |
| 9.ಚತುರನ ಚಾತುರ್ಯ | 04 | | | | 1(4) |
| ನಾಟಕ: ಬೋಳೇಶಂಕರ | 31 | 3(1) | 5(2) | 2(3) | 3(4) |
| ಭಾಷಾಭ್ಯಾಸ | 14 | | 7(2) | | |
| ರಚನೆ | 10 | | | | 2(5) |
| ಲೇಖನ | 08 | | | | 2(4) |
| ವಿಸ್ತರಣೆ | 08 | | | | 2(4) |
| ಒಟ್ಟು ಪ್ರಶ್ನೆಗಳು | -- | -- | -- | -- | 54 |
| ಒಟ್ಟು ಅಂಕಗಳು | -- | -- | -- | -- | 159 |